ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಸೋಮವಾರ, ದಿನಾಂಕ : 22ನೇ ಜುಲೈ, 2019

ಮನಮುಲ್ ಡೈರಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

428 (666) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ, ಗೆಜ್ಜಲಗರೆ ಸಮೀಪವಿರುವ ಮನಮುಲ್ ಡೈರಿಯಲ್ಲಿ ಪ್ರಸ್ತುತ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಪೂರೈಸಲು ಯಾವ ಏಜೆನ್ಸಿಗೆ ಗುತ್ತಿಗೆ ನೀಡಲಾಗಿದೆ ;

(ಆ) ಈ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುವ ವಿವಿಧ ವೃಂದದ ನೌಕರರಿಗೆ ನೀಡುವ ಮಾಸಿಕ ಗೌರವ ಧನದ ಮೊತ್ತವೆಷ್ಟು; ಕಳೆದ ಐದು ವರ್ಷಗಳಿಂದ ಈವರೆವಿಗೆ ಮನಮುಲ್ ಮತ್ತು ಏಜೆನ್ಸಿರವರ ಪಿ.ಎಫ್ ಮತ್ತು ಇ.ಎಸ್.ಐ ವಂತಿಗೆ ಮೊತ್ತವೆಷ್ಟು; ಮನಮುಲ್‌ನಿಂದ ನೀಡಿರುವ ಮೊತ್ತವೆಷ್ಟು ಹಾಗೂ ಏಜೆನ್ಸಿರವರು ಸಂದಾಯ ಮಾಡಿರುವ ಮೊತ್ತವೆಷ್ಟು ; (ಕಳೆದ 05 ವರ್ಷಗಳ ವರ್ಷವಾರು ಮಾಹಿತಿ ನೀಡುವುದು)

(ಇ) ಈ ಗುತ್ತಿಗೆ ನೌಕರರ ಗೌರವ ಸಂಭಾವನೆ, ಪಿ.ಎಫ್ ಮತ್ತು ಇತರೆ ಸೌಲಭ್ಯಗಳನ್ನು ನೀಡುವಲ್ಲಿ ವಂಚನೆಯಾಗಿರುವುದು

ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಯಾವ ತನಿಖಾ ಸಂಸ್ಥೆಯಿಂದ ತನಿಖೆ ಮಾಡಿಸಲಾಗಿದೆ ; ಈ ಬಗ್ಗೆ ಕೈಗೊಂಡ ಕ್ರಮವೇನು ? (ವಿವರವಾದ ಮಾಹಿತಿ ನೀಡುವುದು)